ಸುಮಾರಾಗಿತ್ತು. ಕುಳಿತುಕೊಳ್ಳುವುದೆಲ್ಲಿ ಅನ್ನುವ ಗೊಂದಲದಲ್ಲಿ ಕಾಲು ಮಡಿಸಿ ಕುಳಿತು ಒರಟು ಗೋಡೆಗಾತುಕೊಂಡ.

ಹೊಗೆಯೆಬ್ಬಿಸುತ್ತಿದ್ದವಳು ಮೇಲೆದ್ದಳು. ಸೊಂಟದಿಂದ ಮೊಳಕಾಲ ತುಸು ಕೆಳವರೆಗೆ ಬರುವ ಮುಂಡು, ಮುಂದುಗಡೆಯಿಂದ ಹೆಗಲಮೇಲೆ ಹಾಕಿದ ಮಾಸಿದ ಮೇಲುದವೆಂಬ ಪಂಚೆಯ ತುಂಡು. ಜೋತು ಹೊರಬಿದ್ದ ಎದೆಗಳ ಪರಿವೆ ಇದ್ದಂತಿರಲಿಲ್ಲ. ಎದ್ದು ಹೊರಬಂದ. ಅವರಿಬ್ಬರು ಅಂಗೈಯಗಲದ ಅಂಗಳದಲ್ಲಿ ಕುಳಿತು ಊಟ ಸುರುಮಾಡಿದ್ದರು. ಬೇಯಿಸಿದ ಎಂತದೊ ಗೆಡ್ಡೆಗಳು, ಜೊತೆಗಿರುವುದು ಆಕಾರದಿಂದಲೂ ಒಳಗೆ ಪಸರಿಸಿದ ವಾಸನೆಯಿಂದಲೂ ಮೀನು ಅನಿಸಿತು. ತನ್ನೊಂದು ಮಾತೂ ಕೇಳಲಿಲ್ಲ ಇವರು ಅನ್ನುವ ಅಚ್ಚರಿಯಲ್ಲಿ ಕರಾರು ನೆನಪಾಯಿತು. ಅಂದರೆ, ತನಗೆ ಇವರ ಜೊತೆ ಉಳಿದುಕೊಳ್ಳಲು ಮಾತ್ರ ವ್ಯವಸ್ಥೆ; ಅವನ ಊಟ ಅವನು ನೋಡಿಕೊಳತಾನೆ ಅಂತ ಹೇಳಿರಬಹುದು ಅನ್ನುವುದು ಹೊಳೆಯಿತು. ಲಾಚಾರಾದ ಭಾವನೆಯಲ್ಲಿ ಹೊಟ್ಟೆ ಚುರುಗುಟ್ಟಿತು. ಇವನ ಮುಖಭಾವದಲ್ಲಿ ಅವರಿಗೇನೊ ಅನಿಸಿರಬೇಕು. ಅವಳು ಗೆಡ್ಡೆಯೊಂದನ್ನು ಎತ್ತಿ ಇವನತ್ತ ಹಿಡಿದಳು. ಅವರ ಊಟ ಕಸಿದುಕೊಳ್ಳುತ್ತಿದ್ದೇನೊ ಅನಿಸಿ ಬೇಡ ಅನ್ನಲು ಬಾಯವರೆಗೆ ಬಂತು. ಆದರೆ, ಇದು ತಪ್ಪಿದರೆ ತಾನಿವತ್ತು ಊಟಕ್ಕೆಲ್ಲಿ ಹೋಗುವುದು ಅನ್ನುವ ಭಯದಲ್ಲಿ ಕೈಯೊಡ್ಡಿದ. ಕಾಡಿನ ಹೆಸರು ಗೊತ್ತಿಲ್ಲದ ಗೆಡ್ಡೆ; ರುಚಿಯಾಗಿತ್ತು. ಮಡಕೆಯಲ್ಲಿದ್ದ ನೀರನ್ನು ಗರಟೆಯಲ್ಲಿ ಕುಡಿದ. ಹಾಕಿದ ಚಡ್ಡಿ ಅಂಗಿ ಬಿಟ್ಟರೆ ಕೈಯಲ್ಲಿ ಹಿಡಿದ ಮತ್ತೊಂದು ಒಳಚಡ್ಡಿ ಬನೀನು ತನ್ನ ಲಗೇಜು. ಹೊರಜಗತ್ತಿನ ಎಲ್ಲ ಪದವಿ ಪರಿಚಯಗಳ ಕೋಶ ಕಳಚಿ ಒಂದು ಆತ್ಮರೂಪಿಯಾಗಿದ್ದೇನೆ ತಾನು ಅನಿಸುವಾಗ ನಿದ್ದೆ ಒತ್ತಿಕೊಂಡು ಬಂತು. ಗೋಡೆಯ ಪಕ್ಕ ನೆರಳಿನಲ್ಲಿ ಟವೆಲ್ಲನ್ನೆ ಹಾಸಿ ಅಡ್ಡಾದ.

ನಿದ್ದೆ ಹರಿದಾಗ ಕಂದುಬಣ್ಣದ ಇಳಿಬಿಸಿಲು ಮರಗಳ ತುದಿಯಲ್ಲಿತ್ತು. ಕುಳಿತಲ್ಲೆ ಗುಡಿಸಲ ಬಾಗಿಲತ್ತ ತಿರುಗಿದವನಿಗೆ ಅವಳು ಕಂಡಳು. ಯಕ್ಷಗಾನದ ಬಯಲಿನಲ್ಲಿ ನಿದ್ದೆಹೋಗಿ ಎದ್ದವನಿಗೆ ಬೆಳಗಿನಜಾವದಲ್ಲಿ ರಂಗದಮೇಲೆ ಬಂದ ಬಣ್ಣದ ವೇಷಧಾರಿಯಂತೆ ಅವಳು ಭಾಸವಾದಳು. ಸಿಗಿದಿಟ್ಟುಕೊಂಡ ಬಿದಿರು ಪಕ್ಕದಲ್ಲಿತ್ತು. ಅವಳು ಎಂತಹದನ್ನೊ ಹೆಣೆಯುತ್ತಿದ್ದಳು. ಇವತ್ತು ರಾತ್ರಿಯ ಊಟ ತಾನೆ ಸಂಪಾದಿಸಿಕೊಳ್ಳಬೇಕು ಅನ್ನುವುದು ಸ್ಫುರಿಸಿತು. ಎದ್ದು ಅತ್ತಿತ್ತ ನೋಡಿ ಸ್ವಲ್ಪವೆ ದೂರದ ಹಳ್ಳದತ್ತ ಹೊರಟ. ಹುಡುಕಾಡಿದವನಿಗೆ ಬಿಳಿಬಿಳಿಯಾಗಿ ಗೊಂಚಲಾದ ಮುಳ್ಳುಹಣ್ಣು ಕಾಣಿಸಿತು. ಮುತ್ತುಗದೆಲೆಯ ಕೊಟ್ಟೆಯಲ್ಲಿ ತುಂಬಿಕೊಂಡ. ಹಳ್ಳದಲ್ಲಿ ಮೀನು ಹಿಡಿಯಬೇಕು, ಅದನ್ನು ಅವರಿಗೆ ಕೊಟ್ಟರೆ ಆಗ ತಾನೆ ಸಂಪಾದಿಸಿದಂತೆ; ಅವರೊಡನೆ ಹಂಚಿಕೊಳ್ಳಬಹುದು ಅನಿಸಿ ನೀರಿಗಿಳಿದ. ಟವೆಲನ್ನು ಬಲೆಯಂತೆ ಮಾಡಿ ಮೀನು ಹಿಡಿಯಲು ಪ್ರಯತ್ನಿಸಿದ. ಚಾಲಾಕಿ ಮೀನುಗಳು ತಪ್ಪಿಸಿಕೊಳ್ಳುತ್ತಿದ್ದವು. ಒಂದೂ ಸಿಗಲಿಲ್ಲ. ಪ್ರಯತ್ನದಲ್ಲಿ ನೀರಲ್ಲಿ ಬಿದ್ದುದೂ ಆಯಿತು. ಮೇಲೆ ನೋಡಿದರೆ ಮುಸ್ಸಂಜೆ ಹೆಪ್ಪುಗಟ್ಟುತ್ತಿತ್ತು. ದಂಡೆಯಮೇಲೆ ಅವಳು ನಿತ್ತಿದ್ದಳು. ಏನೋ ಹೇಳುತ್ತಿದ್ದಳು. ಎದ್ದುಬಂದವ ಮುಖವುಳಿಸಿಕೊಳ್ಳುವವನಂತೆ ತಾನು ಸಂಪಾದಿಸಿದ ಮುಳ್ಳುಹಣ್ಣುಗಳ ಕೊಟ್ಟೆಯನ್ನು ಅವಳತ್ತ ನೀಡಿ, ಅವಳನ್ನು ಹಿಂದಿನಿಂದ ಅನುಸರಿಸಿದ. ಅವಳ ಮೈಯಿಂದ ವಾಸನೆ ಬರುತ್ತಿತ್ತು. ಕೆಟ್ಟದು ಅಂತ ಅಲ್ಲ; ಹಳ್ಳದಲ್ಲಿ ದಂಡೆಗೆ ತಾಗಿನಿಲ್ಲುವ ಹರಿವಿಲ್ಲದ ನೀರಿಂದ ಬರುವಂತಹ ವಾಸನೆ. ಸ್ನಾನ ಮಾಡದ್ದಕ್ಕೊ ಅಥವ ಹೆಚ್ಚು ಬೆವರುವುದಕ್ಕೊ ಅಂದುಕೊಳ್ಳುತ್ತಿರುವಾಗ ಲಕ್ಷಕ್ಕೆ ಬಂತು: ಇವಳ ಮುಖವೂ ತುಂಬಿಕೊಂಡಿಲ್ಲ; ಕಪ್ಪುಬಣ್ಣ; ಆದರೆ ಯುವತಿ. ಕೆಳಗೆ ಮುಂಡು ಉಟ್ಟಿದ್ದಾಳೆ, ಎದೆಯಮೇಲೆ ಹಾಕಿಕೊಂಡ ಮೇಲುದದಲ್ಲಿ ಬೆತ್ತಲೆ ಬೆನ್ನು ಕಾಣುತ್ತಿತ್ತು. ಗುಡಿಸಲಲ್ಲಿ ಬೆಂಕಿ ಮಿನುಗುತ್ತಿತ್ತು; ಎಂತಹದೊ ಸುಟ್ಟ ಕಮರು ಒಳಗಿಂದ ಬರುತ್ತಿತ್ತು. ಮುತ್ತುಗದೆಲೆಯಲ್ಲಿ ಬೇಯಿಸಿದ ಗೆಡ್ಡೆ, ಹಲಸಿನಕಾಯಿಯ ಚೂರುಗಳು ಜೊತೆಯಲ್ಲಿ